# ಪ್ರಕಾಶನ ಎನ್ನುವ ಜನಪ್ರಿಯ ಮಾರ್ಗ

**ಮ**ಹತ್ತರ ಸಂಶೋಧನೆಯೊಂದರ ಫಲಿತಾಂಶ ಸದ್ದುಗದ್ದಲವಿಲ್ಲದೆ ಪ್ರಕಟವಾಗಿದೆ. ಅದು ಕಥೆಗಾರ ವಸುಧೇಂದ್ರರ ಉತ್ಪ್ರೇಕ್ಷಿತ ಜನಪ್ರಿಯತೆಗೆ ಸಂಬಂಧಿಸಿದ್ದು. ಈ ಜನಪ್ರಿಯತೆಗೆ ಸಂಶೋಧನೆ ಕಂಡುಕೊಂಡಿರುವ ಉತ್ತರ: 'ವಸುಧೇಂದ್ರ ಕಥೆಗಾರ, ಪ್ರಬಂಧಕಾರ ಎನ್ನುವುದು ನಿಜ. ಆದರೆ ಅವರ ಕಥೆಗಳಲ್ಲಿ ಪ್ರಯೋಗಶೀಲತೆ ಎನ್ನುವುದೇ ಇಲ್ಲ. ಹೀಗಿದ್ದೂ ಅವರು ಜನಪ್ರಿಯರಾಗಿರುವುದಕ್ಕೆ ಕಾರಣ ಅವರು ಪ್ರಕಾಶಕರಾಗಿರುವುದಲ್ಲದೆ ಬೇರೇನೂ ಅಲ್ಲ'. ಅಂದಹಾಗೆ, ಈ ಸಂಶೋಧನೆ ಮಾಡಿರುವುದು ಮತ್ತೊಬ್ಬ ಕಥೆಗಾರರು.

ಈ ಪ್ರಮೇಯದ ಮುಂದುವರಿದ ಭಾಗದಲ್ಲಿ, 'ವಸುಧೇಂದ್ರ ಅವರಿಗಿಂತಲೂ ಒಳ್ಳೆಯ ಕಥೆಗಳನ್ನು ಬರೆದಿರುವ ಕಥೆಗಾರ್ತಿಯೊಬ್ಬರ ಕಥೆಗಳನ್ನು ಬೆಲೆಕಟ್ಟುವ ಕೆಲಸವೇ ಸರಿಯಾಗಿ ನಡೆದಿಲ್ಲ' ಎನ್ನಲಾಗಿದೆ. ಆದರೆ, ಪ್ರಮೇಯ ಮಂಡಿಸಿರುವ ಸಂಶೋಧಕರು ಮೆಚ್ಚಿಕೊಂಡಿರುವ ಕಥೆಗಳ ಸಂಕಲನಗಳನ್ನು ಇದೇ ವಸುಧೇಂದ್ರ ಪ್ರಕಟಿಸಿದ್ದು, ಆ ಪುಸ್ತಕಗಳಿಗೆ ಮೂರ್‍ನಾಲ್ಕು ಪ್ರಶಸ್ತಿಗಳೂ ಬಂದಿವೆ. ಈ ಕಥೆಗಳ ಬಗ್ಗೆ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ವಸುಧೇಂದ್ರ ಭರ್ಜರಿ ಭಾಷಣವನ್ನೂ ಬಿಗಿದಿದ್ದರು ಎನ್ನುವುದು ಮೈಸೂರಿಗೆ ಹತ್ತಿರದಲ್ಲಿರುವ ಮಂಡ್ಯ ಜನರ ನೆನಪು. ಈ ನೆನಪು ತಕರಾರುಗಳ ವಿರೋಧಾಭಾಸ ಕೈಬಿಟ್ಟು ಪ್ರಮೇಯದ ಸಾಧ್ಯತೆಗಳ ಬಗ್ಗೆ ಯೋಚಿಸೋಣ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಲೇಖಕರೂ ಆಗಿರುವ ಪ್ರಕಾಶಕರ ಉದಾಹರಣೆಗಳು ಸಾಕಷ್ಟಿವೆ. ಆದರೆ, ಅವರೆಲ್ಲ ವಸುಧೇಂದ್ರರಂತೆ ಯಾಕೆ ಪ್ರಸಿದ್ಧರಾಗಲಿಲ್ಲ? ಇದು ಉತ್ತರ ಕಂಡುಕೊಳ್ಳಬೇಕಾದ ಪ್ರಶ್ನೆ. ಅಂತೆಯೇ, ಪ್ರಸ್ತುತ ಸಂಶೋಧನೆಯಲ್ಲೊಂದು ಧರ್ಮಸೂಕ್ಷ್ಮದಂಥ 'ಪುಸ್ತಕಸೂಕ್ಷ್ಮ'ವಿದೆ. ವಸುಧೇಂದ್ರರಿಗೆ ತಮ್ಮ ಜನಪ್ರಿಯತೆಯ ಗುಟ್ಟು ಮನದಟ್ಟಾಗಿ, ಈ ಸಲ್ಲದ ಉಸಾಬರಿಯೇ ಬೇಡ ಎಂದು ಅವರು ಇತರರ ಪುಸ್ತಕ ಪ್ರಕಟಣೆಯನ್ನೇ ನಿಲ್ಲಿಸಿಬಿಟ್ಟರೆ? ಹೀಗೇನಾದರೂ ಆದಲ್ಲಿ, 'ಛಂದ ಕೃಪೆ'ಗಾಗಿ ಕಾದು ವಿಮರ್ಶಾಪ್ರಜ್ಞೆಯನ್ನೇ ಮರೆತಿರುವ ಬರಹಗಾರರಿಗೆ ಅನ್ಯಾಯವಾಗುವುದಿಲ್ಲವೆ?

ಸಾಧ್ಯತೆಗಳೇನಾದರೂ ಇರಲಿ, ಕನ್ನಡದ ವಿಮರ್ಶಕರ ಅಭಿರುಚಿ ಪಾತಾಳಕ್ಕೆ ಕುಸಿದಿರುವ ಬಗ್ಗೆ ಸಂಶೋಧಕ ಕಥೆಗಾರರು ವ್ಯಕ್ತಪಡಿಸಿರುವ ಆತಂಕವಿದೆಯಲ್ಲ, ಅದು ಸಹಜವಾದುದು. ಹೊಸ ಪೀಳಿಗೆಯ ಬರಹಗಾರರ ಬಗ್ಗೆ ವಿಮರ್ಶಕರಿಗೆ 'ಪ್ರೇಮ' ಎಲ್ಲಿದೆ? ಅದರಲ್ಲೂ ದೂರದ ನಗರಗಳಲ್ಲೋ, ವಿದೇಶದ ಶಹರಗಳಲ್ಲೋ ಕೆಲಸ ಮಾಡಿಕೊಂಡು ದೇಶಸೇವೆಯ ಜೊತೆಗೆ ಬರವಣಿಗೆಯ ಮೂಲಕ ನುಡಿಸೇವೆಯನ್ನೂ ಮಾಡುತ್ತಿರುವ ಸಾಹಿತಿಗಳ ಬಗ್ಗೆ ಅವರು ಯಾಕೆ ಕಣ್ಣುಹಾಯಿಸುತ್ತಿಲ್ಲ?

ಅಂದಹಾಗೆ, ಕನ್ನಡ ಭುವನೇಶ್ವರಿಯ 'ಹೈಟೆಕ್ ಮೊಗಸಾಲೆ'ಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ವದಂತಿ– 'ಛಂದ ಪುಸ್ತಕ ಸ್ಪರ್ಧೆ'ಯಲ್ಲಿ ಈ ಸಂಶೋಧಕರು ಕೂಡ ಭಾಗವಹಿಸಿದ್ದು, ಸ್ವಲ್ಪದರಲ್ಲಿಯೇ ಪ್ರಶಸ್ತಿ ವಂಚಿತರಾಗಿದ್ದರು'.

**–ಮಹತಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68